# ಕನ್ನಡ ಸಾಹಿತ್ಯ ಪರಿಷತ್ತು

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮
ಸ್ಥಾಪನೆ : ೧೯೧೫ ದೂರವಾಣಿ : ೦೮೦ ೨೬೬೨೧೯೯೧, ೨೬೬೨೩೫೮೪, ೨೨೪೨೩೪೮೬೭, ೨೬೬೨೭೯೯೨
http://www.kasapa.in e-mail : kannadaparishattu@gmail.com

## ಸಮಾನ ಮನಸ್ಕರ ವೇದಿಕೆ, ಬೆಂಗಳೂರು ಹಾಗೂ ಇನ್ನಿತರರ ವಿರುದ್ಧ ಬೆಂಗಳೂರಿನ ಮಾನ್ಯ ನ್ಯಾಯಾಲಯ ತಾತ್ಕಾಲಿಕ ಪ್ರತಿಬಂಧಕ ಆಜ್ಞೆ ಹೊರಡಿಸಿರುವ ಕುರಿತು

೧. ಕನ್ನಡ ಸಾಹಿತ್ಯ ಪರಿಷತ್ತಿನ ೨೦೨೧ರ ರಾಜ್ಯಾಧ್ಯಕ್ಷರ ಚುನಾವಣೆಯಲ್ಲಿ ಸ್ಪರ್ಧಿಸಿ, ಹೀನಾಯವಾಗಿ ಸೋತು, ಠೇವಣಿಯನ್ನು ಕಳೆದುಕೊಂಡು, ಸೋಲನ್ನು ಒಪ್ಪಿಕೊಳ್ಳದೇ ಹತಾಶೆ ಮನೋಭಾವದಿಂದ (೧)**ಸಿ.ಕೆ. ರಾಮೇಗೌಡ** ಹಾಗೂ ಅವರ ಚುನಾವಣಾ ಪ್ರಚಾರಕರಾದ (೨)**ಶಂಕರ್ ಹೂಗಾರ್** ಇವರು ಅತೃಪ್ತರಾಗಿ, ಕಾನೂನು ಬಾಹಿರವಾಗಿ ಸೃಷ್ಟಿಯಾದ ಮತ್ತು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಲ್ಲಿ ನೋಂದಾಯಿತವಲ್ಲದ (೩)**'ಸಮಾನ ಮನಸ್ಕರ ವೇದಿಕೆ, ಬೆಂಗಳೂರು'** ಈ ಹೆಸರಿನಲ್ಲಿ, ಸಮಗ್ರ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ **"ಕನ್ನಡ ಸಾಹಿತ್ಯ ಪರಿಷತ್ತಿನ"** ವಿರುದ್ಧ ದುರುದ್ದೇಶಪೂರ್ವಕವಾಗಿ ಸುಳ್ಳು ವದಂತಿಗಳನ್ನು ಸೃಷ್ಟಿ ಮಾಡಿ, ಪರಿಷತ್ತಿನ ಆಡಳಿತಕ್ಕೆ ಸಂಬಂಧಪಟ್ಟ ವಿಷಯದಲ್ಲಿ ಹಸ್ತಕ್ಷೇಪ ಮಾಡುತ್ತಾ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿ ಅವರು ದುರಾಡಳಿತದಲ್ಲಿ ತೊಡಗಿದ್ದಾರೆ ಎಂದು ಸುಳ್ಳು ಆರೋಪ ಹೊರಿಸಿ **'ಸಮಾನ ಮನಸ್ಕರ ವೇದಿಕೆ'**ಯಿಂದ ಸೋಮವಾರ ದಿನಾಂಕ ೧೨–೦೬–೨೦೨೩ ರಂದು ಬೆಳಗ್ಗೆ ೧೧.೦೦ ಗಂಟೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಮುಂಭಾಗದಲ್ಲಿ ಪ್ರತಿಭಟನೆ ಎಂಬ ಸಂದೇಶವನ್ನು ಸಾಮಾಜಿಕ ಜಾಲತಾಣದಲ್ಲಿ ಹರಡುತ್ತಿದ್ದಾರೆ.

೨. ಜೊತೆಗೆ ದಿನಾಂಕ ೧೨.೦೬.೨೦೨೩ರಂದು **ಪ್ರತಿಭಟನಾ ಸಭೆ** ಎಂದು ಸಮಾನ ಮನಸ್ಕರ ವೇದಿಕೆ, ಬೆಂಗಳೂರು ಹೆಸರಿನಡಿಯಲ್ಲಿ ಕರಪತ್ರ ಸಂದೇಶ ಹರಿಯಬಿಟ್ಟು, ಈ ಪ್ರತಿಭಟನಾ ಸಭೆಯಲ್ಲಿ ಭಾಗವಹಿಸಲಿರುವವರು ಎಂದು ಕರಪತ್ರದಲ್ಲಿ ನಮೂದಿಸಿರುವ ಕರ್ನಾಟಕ ಕೈಗಾರಿಕ ಮತ್ತು ವಾಣಿಜ್ಯ ಕನ್ನಡ ಸಂಘಗಳ ಒಕ್ಕೂಟದ ಅಧ್ಯಕ್ಷರಾದ **ಶ್ರೀ ಎಂ. ತಿಮ್ಮಯ್ಯ**, ಕನ್ನಡ ಜನಶಕ್ತಿ ಕೇಂದ್ರ ಪದಾಧಿಕಾರಿಗಳಲ್ಲಿ ಒಬ್ಬರಾದ **ಶ್ರೀ ಎಂ.ಕೆ. ರಂಗಪ್ಪ** ಹಾಗೂ ಹಿರಿಯ ಕನ್ನಡಪರ ಹೋರಾಟಗಾರರಾದ **ಶ್ರೀ ಶೇ. ಭೋ. ರಾಧಾಕೃಷ್ಣ** ಇವರುಗಳು ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ ಈ ವಿಚಾರವಾಗಿ ಮಾತನಾಡಿ, **ಅವರ ಅನುಮತಿ ತೆಗೆದುಕೊಳ್ಳದೇ ಸಮಾನ ಮನಸ್ಕರ ವೇದಿಕೆಯವರು,**

**ಅವರ ಹೆಸರುಗಳನ್ನು ದುರುಪಯೋಗ ಪಡಿಸಿಕೊಂಡು ಪ್ರತಿಭಟನಾ ಸಭೆಯ ಕರಪತ್ರದಲ್ಲಿ ಮುದ್ರಿಸಿರುತ್ತಾರೆ. ಈ ಬಗ್ಗೆ ಕನ್ನಡ ಸಾಹಿತ್ಯ ಪರಿಷತ್ತಿಗೂ ಹಾಗೂ ನ್ಯಾಯಾಲಯದಲ್ಲಿಯೂ ಪ್ರಮಾಣಪತ್ರವನ್ನು ಸಲ್ಲಿಸುತ್ತೇವೆ** ಎಂದು ಸ್ಪಷ್ಟವಾಗಿ ತಿಳಿಸಿರುತ್ತಾರೆ. ಸಿ.ಕೆ. ರಾಮೇಗೌಡ ಹಾಗೂ ಶಂಕರ್ ಹೂಗಾರ ಅವರು ದುರುದ್ದೇಶವನ್ನು ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರತಿಷ್ಠೆ, ಘನತೆ, ಗೌರವಗಳನ್ನು ಹಾಳು ಮಾಡುವ ಉದ್ದೇಶವನ್ನು ಹೊಂದಿರುವುದು ಇದರಿಂದ ಸ್ಪಷ್ಟವಾಗಿ ಎದ್ದುಕಾಣುತ್ತದೆ. ಇವರ ಈ ದುರುದ್ದೇಶಪೂರಿತ ನಡೆ, ಕನ್ನಡ ಸಾಹಿತ್ಯ ಪರಿಷತ್ತಿನ ವಿರುದ್ಧ ಮಾತ್ರವಲ್ಲ, ಇದು ಸಮಸ್ತ ಕನ್ನಡಿಗರ ವಿರುದ್ಧವೂ ಆಗಿರುತ್ತದೆ.

೩. ಪೊಲೀಸ್ ಇನ್ಸ್‌ಪೆಕ್ಟರ್ ವಿ.ವಿ. ಪುರಂ ಠಾಣೆಯವರು ಕರ್ನಾಟಕ ಉಚ್ಚ ನ್ಯಾಯಾಲಯದ **WP 5781 / 2021 (GM-RES-PIL)** ಆದೇಶದಂತೆ, ಅನಧಿಕೃತ ಧರಣಿ / ಪ್ರತಿಭಟನೆ / ಮೆರವಣಿಗೆಯಿಂದ ಸಾರ್ವಜನಿಕರಿಗೆ ತೊಂದರೆಯಾಗುವುದರಿಂದ ಅಂತಹ ಧರಣಿ / ಪ್ರತಿಭಟನೆ / ಮೆರವಣಿಗೆಗಳಿಗೆ ಅವಕಾಶ ನೀಡಬಾರದು ಎಂದು ಸ್ಪಷ್ಟವಾಗಿ ಆದೇಶ ಕೊಟ್ಟಿರುವ ಹಿನ್ನೆಲೆಯಲ್ಲಿ ಸಿ.ಕೆ. **ರಾಮೇಗೌಡ** ಹಾಗೂ **ಶಂಕರ್ ಹೂಗಾರ್** ಇವರಿಂದ ಸೃಷ್ಟಿಯಾದ 'ಸಮಾನ ಮನಸ್ಕರ ವೇದಿಕೆ, ಬೆಂಗಳೂರು' ಹಮ್ಮಿಕೊಂಡಿರುವ ಪ್ರತಿಭಟನೆಗೆ ಪರವಾನಗೆಯನ್ನು ನಿರಾಕರಿಸಿದ್ದಾರೆ. ಅದರ ಪ್ರತಿಯನ್ನು ಇದರೊಂದಿಗೆ ನೀಡಲಾಗಿದೆ.

೪. **(೪)ಕನ್ನಡ ಜನಶಕ್ತಿ ಕೇಂದ್ರದ** ಹೆಸರಿನಲ್ಲಿ ಅದರ ಅಧ್ಯಕ್ಷರೂ ಆದ ಸಿ.ಕೆ. ರಾಮೇಗೌಡ, **(೫)ಕನ್ನಡ ಸಂಘರ್ಷ ಸಮಿತಿಯ** ಅಧ್ಯಕ್ಷರಾದ **ಎಸ್. ನಾಗರಾಜಸ್ವಾಮಿ,** ಪರಿಷತ್ತಿನ ಚುನಾವಣೆಯಲ್ಲಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿ ಹೀನಾಯವಾಗಿ ಸೋಲುವುದರೊಂದಿಗೆ ಠೇವಣಿ ಕಳೆದುಕೊಂಡ ಇನ್ನೋರ್ವ ಅಭ್ಯರ್ಥಿ **(೬)ಶೇಖರಗೌಡ ಮಾಲಿ ಪಾಟೀಲ** ಹಾಗೂ ಅವರ ಚುನಾವಣಾ ಪ್ರಚಾರದ ಸಂಚಾಲಕ ಮತ್ತು ಸ್ವಯಂ ಘೋಷಿತ ಪತ್ರಕರ್ತರೆಂದು ಕರೆದುಕೊಳ್ಳುವ **(೭)ಆರ್.ಜಿ. ಹಳ್ಳಿ ನಾಗರಾಜ,** ಸಾಮಾಜಿಕ ಕಾರ್ಯಕರ್ತ ಎಂದು ತನ್ನನ್ನು ತಾನೇ ಕರೆದುಕೊಳ್ಳುವ **(೮)ಎನ್. ಹನುಮೇಗೌಡ,** ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಜವಾಬ್ದಾರಿ ಸ್ಥಾನದಲ್ಲಿದ್ದುಕೊಂಡು, ಪರಿಷತ್ತಿನ ವಿರುದ್ಧವಾಗಿ ಹಾಗೂ ಕನ್ನಡಪರ ವಿರೋಧಿ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿರುವ **(೯)ಎಂ. ಪ್ರಕಾಶಮೂರ್ತಿ** ಹಾಗೂ ಪರಿಷತ್ತಿನ ಬೆಂಗಳೂರು ನಗರ ಜಿಲ್ಲಾ ಘಟಕದ ಕಾರ್ಯದರ್ಶಿಯ ಜವಾಬ್ದಾರಿ ಸ್ಥಾನದಲ್ಲಿದ್ದುಕೊಂಡು, ಪರಿಷತ್ತಿನ

ವಿರುದ್ಧವಾಗಿ ಹಾಗೂ ಕನ್ನಡಪರ ವಿರೋಧಿ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿರುವ (೧೦)**ಎಲ್. ಹರ್ಷ** ಮತ್ತು ಶಿವಮೊಗ್ಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಜವಾಬ್ದಾರಿ ಸ್ಥಾನದಲ್ಲಿದ್ದುಕೊಂಡು ಪರಿಷತ್ತಿನ ವಿರುದ್ಧವಾಗಿ ಹಾಗೂ ಕನ್ನಡ ವಿರೋಧಿ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿರುವ (೧೧)**ಡಿ. ಮಂಜುನಾಥ್**, ಹಾಗೆಯೇ ಪರಿಷತ್ತಿನ ಆವರಣದಲ್ಲಿ ಕನ್ನಡ ಭುವನೇಶ್ವರೀ ದೇವಿ ಪುತ್ಥಳಿಯನ್ನು ಪ್ರತಿಷ್ಠಾನ ಮಾಡಿದಾಗ, **"ಇದು ಹಿಂದುತ್ವದ ಪ್ರತಿಪಾದನೆ"** ಎಂದು ಸಾಮಾಜಿಕ ಜಾಲತಾಣದಲ್ಲಿ ಕೋಮುದ್ವೇಷದ ಸಂದೇಶವನ್ನು ಹರಿಯಬಿಟ್ಟು ದ್ವೇಷ ಹರಡುತ್ತಿರುವ ಹಾಗೂ ನಾಡದೇವಿಗೆ ಅಪಮಾನಿಸಿದ ಮತ್ತು ಕನ್ನಡಿಗರ ಭಾವನೆಗಳಿಗೆ ಧಕ್ಕೆಯುಂಟುಮಾಡಿದ (೧೨)**ರಾಮಣ್ಣ ಕೋಡಿಹೊಸಳ್ಳಿ** ಜೊತೆಗೆ ಕಾನೂನನ್ನು ಕೈಗೆ ತೆಗೆದುಕೊಂಡು ಕ.ಸಾ.ಪ. ಕಟ್ಟಡಕ್ಕೆ ಧುಮುಕುತ್ತೇನೆ ಎಂದು ಬೆದರಿಕೆಯ ಹೇಳಿಕೆಯನ್ನು ನೀಡಿದ್ದ (೧೩)**ಕೊ.ನಾ. ನಾಗರಾಜ** ಇವರುಗಳು ಕನ್ನಡ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದು, ಕನ್ನಡ ಸಾಹಿತ್ಯ ಪರಿಷತ್ತಿನ ವಿರುದ್ಧವಾಗಿ, ಅದರಲ್ಲೂ 'ಪಂಪ ಮಹಾಕವಿ ರಸ್ತೆ'ಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ರಸ್ತೆ ಮಾಡುತ್ತಾರೆ ಎಂಬ ಸುಳ್ಳು ಸುದ್ದಿ ಜೊತೆಗೆ 'ನಾಲ್ವಡಿ ಶ್ರೀಕೃಷ್ಣರಾಜ ಒಡೆಯರ್ ಮೂರ್ತಿಯ' ಬಗ್ಗೆ ಇಲ್ಲ ಸಲ್ಲದ ಸುಳ್ಳು ಸುದ್ದಿಗಳನ್ನು ಸಾಮಾಜಿಕ ಜಾಲತಾಣಗಳ ಮೂಲಕ ಎಲ್ಲೆಡೆ ಹಬ್ಬಿಸುವುದರೊಂದಿಗೆ, ಸಮಗ್ರ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಹಾಗೂ ಎಲ್ಲ ಕನ್ನಡ ಸಂಘ–ಸಂಸ್ಥೆಗಳಿಗೆ ಮಾತೃಸಂಸ್ಥೆಯಾಗಿರುವ, ಸುದೀರ್ಘ ೧೦೮ ವರ್ಷಗಳ ಇತಿಹಾಸ ಹೊಂದಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಘನತೆ, ಗೌರವ, ಪ್ರತಿಷ್ಠೆಗಳಿಗೆ ಹಾಗೂ ಕನ್ನಡಿಗರ ಭಾವನೆಗಳಿಗೆ ಧಕ್ಕೆಯನ್ನುಂಟುಮಾಡುತ್ತಿದ್ದಾರೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಆಡಳಿತದಲ್ಲಿ ಯಾವುದೇ ಜವಾಬ್ದಾರಿ ಸ್ಥಾನವನ್ನು ಹೊಂದಿಲ್ಲದಿದ್ದರೂ,(೩ ಲಕ್ಷದ ೬೦ ಸಾವಿರ ಸದಸ್ಯರಲ್ಲಿ ಇವರು ಕೆಲವರು) ಪರಿಷತ್ತಿನ ದಿನನಿತ್ಯದ ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತಾ, ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಚಟುವಟಿಕೆಗಳಿಗೆ ಅಡ್ಡಿಯನ್ನು ಉಂಟುಮಾಡುತ್ತಿದ್ದಾರೆ.

೫. ಸುಳ್ಳು ಸುದ್ದಿಗಳಿಂದ ದ್ವೇಷವನ್ನು ಹರಡಿಸುವಲ್ಲಿ ಕಾರ್ಯಪ್ರವೃತ್ತರಾಗಿರುವ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, **ಬೆಂಗಳೂರಿನ ಮಾನ್ಯ ನ್ಯಾಯಾಲಯದಲ್ಲಿ ದಾವೆಯೊಂದನ್ನು ಹೂಡಿ, ಮೇಲೆ ಹೇಳಿದ ಪ್ರತಿವಾದಿಗಳು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಪರಿಷತ್ತಿನ ಅಧ್ಯಕ್ಷರ ವಿರುದ್ಧವಾಗಿ ಆಧಾರರಹಿತ ಆರೋಪವನ್ನು ಮಾಡಬಾರದು, ಸುಳ್ಳು ಸುದ್ದಿಗಳನ್ನು ಹರಡಬಾರದು ಹಾಗೂ**

ಪರಿಷತ್ತಿನ ಘನತೆ, ಗೌರವಗಳಿಗೆ ಧಕ್ಕೆಯುಂಟಾಗುವಂತೆ ನಡೆದುಕೊಳ್ಳಬಾರದು ಮತ್ತು ಪರಿಷತ್ತಿನ ಆಂತರಿಕ ಹಾಗೂ ಆಡಳಿತಾತ್ಮಕ ವಿಚಾರದಲ್ಲಿ ಸುಖಾಸುಮ್ಮನೆ ಮೂಗುತೂರಿಸಿ, ಹಸ್ತಕ್ಷೇಪ ಮಾಡಬಾರದು ಹಾಗೂ ಚುನಾಯಿತ ಅಧ್ಯಕ್ಷರ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಅಡ್ಡಿಪಡಿಸಬಾರದು ಹಾಗೂ ತಮಗೆ ಸಂಬಂಧಪಡದ ಯಾವುದೋ ವಿಷಯಗಳನ್ನು ಪದೇ ಪದೇ ಎತ್ತುತ್ತಾ, ಕನ್ನಡ ಸಾಹಿತ್ಯ ಪರಿಷತ್ತಿನ ಅಮೂಲ್ಯವಾದ ಸಮಯವನ್ನು ಹಾಳು ಮಾಡಬಾರದೆಂದು ಸಲ್ಲಿಸಿದ್ದ ದಾವೆ/ಅರ್ಜಿಯನ್ನು ಮಾನ್ಯ ಘನ ನ್ಯಾಯಾಲಯವು ಪುರಸ್ಕರಿಸಿ, ಮೇಲೆ ಹೇಳಿದ ಪ್ರತಿವಾದಿಗಳು ಪರಿಷತ್ತಿನ ವಿರುದ್ಧವಾಗಲೀ, ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿ ಅವರ ವಿರುದ್ಧವಾಗಲೀ ಸಾರ್ವಜನಿಕವಾಗಿ ಮಾತನಾಡಬಾರದು ಹಾಗೂ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣಗಳ ಮೂಲಕ ಪ್ರಕಟಿಸಬಾರದು ಎಂದು ಮಾನ್ಯ ನ್ಯಾಯಾಲಯವು ತಾತ್ಕಾಲಿಕ ಪ್ರತಿಬಂಧಕ ಆಜ್ಞೆಯನ್ನು ಇಂದು ೯–೬–೨೦೨೩ರಂದು ಹೊರಡಿಸಿದೆ.

೬. ಒಂದು ವೇಳೆ ನ್ಯಾಯಾಲಯದ ಆದೇಶವನ್ನು ಧಿಕ್ಕರಿಸಿ ಯಾರಾದರೂ ಕಾನೂನುಬಾಹಿರವಾಗಿ ಪ್ರತಿಭಟನೆ ನಡೆಸಿ, ಕನ್ನಡ ಸಾಹಿತ್ಯ ಪರಿಷತ್ತಿನ ವಿರುದ್ಧವಾಗಿ ಹಾಗೂ ಪರಿಷತ್ತಿನ ಅಧ್ಯಕ್ಷರ ವಿರುದ್ಧವಾಗಿ ದುರುದ್ದೇಶಪೂರ್ವಕವಾಗಿ ಮಾತನಾಡಿದರೆ, ಆದೇಶವನ್ನು ನೀಡಿದ ಮಾನ್ಯ ನ್ಯಾಯಾಲಯದ ನ್ಯಾಯಾಂಗ ಉಲ್ಲಂಘನೆ ಆಗುವುದರ ಜೊತೆಗೆ, ಮಾನ್ಯ ಉಚ್ಚ ನ್ಯಾಯಾಲಯದ ಆದೇಶ **WP 5781 / 2021 (GM-RES-PIL)**ವನ್ನು ತಿಳಿದು ತಿಳಿದು ಉದ್ದೇಶಪೂರ್ವಕವಾಗಿ ಉಲ್ಲಂಘಿಸಿ, ಸ್ಪಷ್ಟವಾಗಿ ನ್ಯಾಯಾಂಗ ನಿಂದನೆ ಮಾಡಿದಂತಾಗುತ್ತದೆ ಎಂಬ ವಿಷಯವನ್ನು ಸಾರ್ವಜನಿಕ ಹಿತಾಸಕ್ತಿಯಲ್ಲಿ ಎಲ್ಲರ ಗಮನಕ್ಕೆ ಈ ಮೂಲಕ ತರಲಾಗಿದೆ.

ಮಾನ್ಯ ಅಧ್ಯಕ್ಷರ ಅನುಮೋದನೆಯೊಂದಿಗೆ

**ಡಾ. ಪದ್ಮಿನಿ ನಾಗರಾಜು**

ಗೌರವ ಕಾರ್ಯದರ್ಶಿ

**ದಿನಾಂಕ : ೦೯–೦೬–೨೦೨೩**

ನಂ/ವಿಪಿಎಸ್/ಪಿಸಿ/146/2023

ಪೊಲೀಸ್ ಇನ್ಸ್‌ಪೆಕ್ಟರ್ ರವರ ಕಛೇರಿ
ವಿವಿ ಪುರಂ ಪೊಲೀಸ್ ಠಾಣೆ
ಬೆಂಗಳೂರು ನಗರ, ದಿನಾಂಕ:-09.06.2023

# ಹಿಂಬರಹ

******

ಈ ಮೂಲಕ ತಮಗೆ ತಿಳಿಯಪಡಿಸುವುದೇನೆಂದರೆ, ತಾವು ದಿನಾಂಕ 12.06.2023 ರಂದು ಬೆಳಗ್ಗೆ 11.00 ಗಂಟೆಯಿಂದ ಚಾಮರಾಜ್‌ಪೇಟೆಯ ಪಿಎಂಕೆ ರಸ್ತೆಯ ಕನ್ನಡ ಸಾಹಿತ್ಯ ಪರಿಷತ್‌ನ ಮುಂಭಾಗದಲ್ಲಿ ಪ್ರತಿಭಟನಾ ಸಭೆಯನ್ನು ಹಮ್ಮಿಕೊಂಡು, ಮಾಜಿ ಸಚಿವರಾದ ಶ್ರೀಮತಿ. ಬಿ.ಟಿ ಲಲಿತಾ ನಾಯಕ್ ರವರು ಸಭೆಯನ್ನು ಉದ್ಘಾಟಿಸಲಿದ್ದು, ಹಿರಿಯ ಸಾಹಿತಿಗಳಾದ ಜಾಣಗೆರೆ ವೆಂಕಟರಾಮಯ್ಯ ರವರು ಅಧ್ಯಕ್ಷತೆ ವಹಿಸುತ್ತಾರೆ, ಹಾಗೂ ಮುಂತಾದ ಸಾಹಿತಿಗಳು ಒಳಗೊಂಡಂತೆ ಈ ಸಭೆಯಲ್ಲಿ ಸುಮಾರು 80-100 ಜನ ಸೇರಿ ಧ್ವನಿವರ್ಧಕ ಅಳವಡಿಸಿಕೊಂಡು ನಡೆಸುವ ಪ್ರತಿಭಟನೆಗೆ ಅನುಮತಿಯ ಬಗ್ಗೆ ಕೋರಿರುತ್ತೀರಿ.

ಆದರೆ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಫ್ರೀಡಂ ಪಾರ್ಕ್ ಹೊರತುಪಡಿಸಿ ಬೇರೆ ಸ್ಥಳದಲ್ಲಿ ಸಾರ್ವಜನಿಕರಿಗೆ ತೊಂದರೆಯಾಗುವ ಸಂಬಂಧ ಪ್ರತಿಭಟನಾ ಧರಣಿ/ಮೆರವಣಿಗೆ/ಇತ್ಯಾದಿಗಳನ್ನು ನಡೆಯದಂತೆ ನೋಡಿಕೊಳ್ಳುವಂತೆ / ಈ ಸಂಬಂಧ ಅವಕಾಶ/ಅನುಮತಿ ನೀಡಬಾರದೆಂದು ಗೌರವಾನ್ವಿತ ಘನ ಉಚ್ಚ ನ್ಯಾಯಾಲಯ ಸೂಚನೆಯನ್ನು ನೀಡಿದ್ದು, ಇದನ್ನು ಕಟ್ಟುನಿಟ್ಟಾಗಿ ಪಾಲಿಸಲು ಮಾನ್ಯ ಉಚ್ಚ ನ್ಯಾಯಾಲಯವು ಸ್ವಯಂ ಪ್ರೇರಿತ ದಾಖಲಿಸಿಕೊಂಡಿರುವ ರಿಟ್ ಅರ್ಜಿ ನಂ.5781/2021 ರಲ್ಲಿ ನಿರ್ದೇಶನ ನೀಡಿರುತ್ತದೆ. ಈ ಬಗ್ಗೆ ತಪ್ಪದೇ ನಿರ್ದೇಶನಗಳನ್ನು ಪಾಲಿಸುವಂತೆ ಮಾನ್ಯ ಪೊಲೀಸ್ ಆಯುಕ್ತರ ಕಛೇರಿ ಜ್ಞಾಪನ ಸಂ. ಸಿಸಿಆರ್‌ಬಿ/ಪ್ರೋ/ಡಬ್ಲ್ಯುಪಿ/5781/2021 ದಿ:04/08/2022 ರಲ್ಲಿ ಸೂಚಿಸಿರುತ್ತಾರೆ.

ಆದ್ದರಿಂದ ದಿನಾಂಕ:12/06/2023 ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಮುಂಭಾಗದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲು ಸಾಧ್ಯವಿರುವುದಿಲ್ಲ. ಸದರಿ ಪ್ರತಿಭಟನೆಯನ್ನು ಫ್ರೀಡಂ ಪಾರ್ಕ್‌ನಲ್ಲಿ ಹಮ್ಮಿಕೊಳ್ಳಲು ಈ ಮೂಲಕ ಸೂಚಿಸಲಾಗಿದೆ.

ಪೊಲೀಸ್ ಇನ್ಸ್‌ಪೆಕ್ಟರ್
ವಿ.ವಿ. ಪುರಂ ಪೊಲೀಸ್ ಠಾಣೆ
ಬೆಂಗಳೂರು ನಗರ - 560 018

ರವರಿಗೆ

ಶ್ರೀ. ಶಂಕರ್ ಹೂಗಾರ್, ಸಂಚಾಲಕರು,
ಸಮಾನ ಮನಸ್ಕರ ವೇದಿಕೆ, ಬೆಂಗಳೂರು,
ನಂ.4172, ನೇಗಿಲಯೋಗಿ, 2ನೇ ಬಿ ಮೇನ್ ರಸ್ತೆ, ಗಿರಿನಗರ,
ಬೆಂಗಳೂರು-85, ಮೊ:9448085729, 9448615251